**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ</u>**

**<u>ಆಳಂದ</u>**

<u>ಸಿ.ಸಿ. ನಂಬರ 8325 /2022</u> ಸಿ.ಡಬ್ಲೂ.**2** ಪಿ.ಡಬ್ಲೂ.**15**

| | |
|---|---|
| ಹೆಸರು | ಶಂಕರ |
| ತಂದೆ/ಗಂಡ | ನಿಂರಜಪ್ಪಾ |
| ವಯಸ್ಸು | 58 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ನರೋಣಾ |

ದಿನಾಂಕ 05-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:</u>**

ಆರೋಪಿಯ ಪರಿಚಯ ಇರುತ್ತದೆ. ಚಾಸಾ 1, 3 ರಿಂದ 12 ರವರ ಪರಿಚಯ ಇರುತ್ತದೆ. ಮೃತ ಭಗವಂತರವರ ಪರಿಚಯ ಇತ್ತು. ದಿಃ 29-05-2022 ರಂದು 9.45 ರಿಂದ 10.45 ರವರೆಗೆ ಆಸ್ಪತ್ರೆಯಲ್ಲಿ ನನ್ನ ಸಮಕ್ಷಮ ಮೃತ ಭಗವಂತರವರ ದೇಹದಲ್ಲಿ ಆದ ಗಾಯಗಳನ್ನು ತೋರಿಸಿ ಪಂಚನಾಮೆ ಮಾಡಿ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ನಿಪಿ. 2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಸಿ ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರಃ ಎಸ್ ಎಸ್ ಸಿ ವಕೀಲರಿಂದ:</u>

ನನಗೆ ಆಸ್ಪತ್ರೆಗೆ ಯಾರು ಕರೆಸಿರಲಿಲ್ಲ. ಪೋಲಿಸರು ನನಗೆ ಸಾಕ್ಷಿಯ ಸಹಿ ಬೇಕು ಎಂದು ಹೇಳಿದ ಕಾರಣ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಶವ ಪಂಚನಾಮೆಯನ್ನು ಓದಿ ಹೇಳಿರುವುದಿಲ್ಲ ಎಂದರೆ ಸರಿ. ದಿಃ 29-05-2022 ರಂದು 9.45 ರಿಂದ 10.45 ರವರೆಗೆ ಆಸ್ಪತ್ರೆಯಲ್ಲಿ ನನ್ನ ಸಮಕ್ಷಮ ಮೃತ ಭಗವಂತರವರ ದೇಹದಲ್ಲಿ ಆದ ಗಾಯಗಳನ್ನು ತೋರಿಸಿ ಪಂಚನಾಮೆ ಮಾಡಿ ಸಹಿ ಪಡೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ